ಕರಿಘಟ್ಟ ಏತ ನೀರಾವರಿ ಯೋಜನೆ

781(975) ಶ್ರೀ ರಮೇಶ್ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ) : ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) ಶ್ರೀರಂಗಪಟ್ಟಣ ತಾಲ್ಲೂಕು, ಕರಿಘಟ್ಟ ಏತ ನೀರಾವರಿ ಯೋಜನೆಯ ಕಾಮಗಾರಿಯು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಈ ಪ್ರದೇಶವು ಮಳೆಯಾಶ್ರಿತ ಪ್ರದೇಶವಾಗಿದ್ದು, ಸ್ಥಳೀಯ ರೈತರಿಗೆ ವ್ಯವಸಾಯಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ರೈತರ ಈ ತೊಂದರೆಯನ್ನು ನಿವಾರಿಸಲು ಕರಿಘಟ್ಟ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ಸರ್ಕಾರ ಕೂಡಲೇ ಕೈಗೆತ್ತಿಕೊಳ್ಳುವುದೇ ;

ಈ) ಕರಿಘಟ್ಟ ಏತ ನೀರಾವರಿ ಯೋಜನೆಗಾಗಿ ಸರ್ಕಾರ ನಿಗದಿ ಪಡಿಸಿದ್ದ ಅನುದಾನದ ಮೊತ್ತ ಎಷ್ಟು ಮತ್ತು ಇದುವರೆವಿಗೂ ಬಿಡುಗಡೆಯಾಗಿ ವೆಚ್ಚವಾಗಿರುವ ಮೊತ್ತ ಎಷ್ಟು ; (ವಿವರ ಒದಗಿಸುವುದು) ;

ಉ) ಈ ಯೋಜನೆಯು ಸ್ಥಗಿತಗೊಂಡಿರುವುದರಿಂದ ಈ ಯೋಜನೆಯ ಎಲ್ಲಾ ಕಾಲುವೆಗಳು ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಊ) ಹಾಗಿದ್ದಲ್ಲಿ, ಈ ಕಾಲುವೆಗಳ ಮತ್ತು ಸಿ.ಡಿ. ಕಾಮಗಾರಿಗಳ ದುರಸ್ತಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ಒದಗಿಸುವುದು) ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು) :

ಅ) ಈ ಯೋಜನೆ ಸ್ಥಗಿತಗೊಂಡಿರುವುದಿಲ್ಲ

ಆ) ಹೌದು.

ಇ) ಈ ಯೋಜನೆಯು 1992-93ರಲ್ಲಿ ಪೂರ್ಣಗೊಂಡ ನಂತರ 1997ರವರೆಗೆ 225 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸಲಾಗಿದೆ.

ವಿದ್ಯುಚ್ಛಕ್ತಿ ಶುಲ್ಕ ಪಾವತಿಸದ ಕಾರಣ 1997ರಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗಿತ್ತು. 2007ರಲ್ಲಿ ವಿದ್ಯುತ್ ಶುಲ್ಕ ಪಾವತಿಸಿ ವಿದ್ಯುತ್ ಸಂಪರ್ಕವನ್ನು ಪುನಃ ಪಡೆಯಲಾಗಿದೆ. 2009–10ನೇ ಸಾಲಿನಲ್ಲಿ ಎಲ್ಲಾ ಪುನಃರುಜ್ಜೀವನ ಕಾಮಗಾರಿಗಳು ಪೂರ್ಣಗೊಂಡಿದ್ದು, ಯೋಜನೆಯು ಚಾಲನೆಯಲ್ಲಿದೆ. ಪ್ರಸ್ತುತ 3 ರಿಂದ 4 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಆಗುತ್ತಿದೆ. ಇದರಿಂದಾಗಿ ಪೂರ್ಣ ಪ್ರಮಾಣದ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಪ್ರತಿ ದಿನ 16 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲು ಅನುಕೂಲವಾಗುವಂತೆ ಯೋಜನೆಗೆ ಪ್ರತ್ಯೇಕ ವಿದ್ಯುತ್ ಸರಬರಾಜು ಮಾರ್ಗ (ಎಕ್ಸ್‌ಪ್ರೆಸ್ ಫೀಡರ್ ಲೈನ್) ನಿರ್ಮಿಸಲು ರೂ. 60.00 ಲಕ್ಷಗಳ ಪ್ರಸ್ತಾವನೆ ತಯಾರಿಸಲಾಗಿದೆ.

ಈ) 2007–08ನೇ ಸಾಲಿನಲ್ಲಿ ರೂ. 20.00 ಲಕ್ಷಗಳ ಅನುದಾನದಲ್ಲಿ ರೂ. 13.20 ಲಕ್ಷ ವಿದ್ಯುತ್ ಸಂಪರ್ಕಕ್ಕಾಗಿ ಠೇವಣಿ ಮಾಡಲು ರೂ.5.00 ಲಕ್ಷಗಳನ್ನು ಮೋಟಾರ್ ಮತ್ತು ಪಂಪ್‌ಗಳನ್ನು ದುರಸ್ತಿಪಡಿಸಲು ಉಪಯೋಗಿಸಲಾಗಿದೆ.

2009–10ನೇ ಸಾಲಿನಲ್ಲಿ ರೂ.5.00 ಲಕ್ಷಗಳ ಅನುದಾನವನ್ನು ಕಾಲುವೆಗಳ ಅಭಿವೃದ್ಧಿಗಾಗಿ ಉಪಯೋಗಿಸಲಾಗಿದೆ.

2010–11ನೇ ಸಾಲಿನಲ್ಲಿ ರೂ.12.65 ಲಕ್ಷ ಅನುದಾನವನ್ನು ಕೇಬಲ್ ಅಳವಡಿಸಲು, ಕಾಲುವೆಯಲ್ಲಿನ ಸಿ.ಡಿ. ಕಾಮಗಾರಿಗೆ ಮತ್ತು ಏರುಕೊಳವೆ ಮಾರ್ಗದ ದುರಸ್ತಿಗಾಗಿ ಉಪಯೋಗಿಸಲಾಗಿದೆ.

2010–11ನೇ ಸಾಲಿನಲ್ಲಿ ರೂ.8.00 ಲಕ್ಷಗಳ ಅನುದಾನವನ್ನು ಈ ಯೋಜನೆಯ ವಾರ್ಷಿಕ ನಿರ್ವಹಣೆಗಾಗಿ ನೀಡಲಾಗಿದೆ.

ಉ) ಬಂದಿದೆ.

ಊ) ಕರಿಘಟ್ಟ ಏತ ನೀರಾವರಿ ಯೋಜನೆಯ ಕಾಲುವೆಗಳ ದುರಸ್ತಿಯನ್ನು ಒಟ್ಟು ರೂ.15.00 ಲಕ್ಷಗಳ ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ. ಅಡ್ಡಮೋರಿ ಹಾಗೂ ಎಕ್ಸ್‌ಪ್ರೆಸ್ ಫೀಡರ್ ಲೈನ್ ಕಾಮಗಾರಿಗಳಿಗೆ ರೂ.150.00 ಲಕ್ಷಗಳ ಪ್ರಸ್ತಾವನೆಯನ್ನು ತಯಾರಿಸಿದ್ದು, ಅನುದಾನದ ಲಭ್ಯತೆಯ ಅನುಸಾರ ಕ್ರಮ ಕೈಗೊಳ್ಳಲಾಗುವುದು.